ದಿನಾಂಕಃ 27-03-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ಅರ್ಜಿಯ ಆದೇಶದ ಮೇರೆಗೆ ಪಾಟೀಸವಾಲು ವಾದಿ ಪರ ವಕೀಲರಾದ ಶ್ರೀ. ಬಿ ಎನ್ ಆರ್. ವಕೀಲರಿಂದ

ಈ ದಾವೆಯನ್ನು ಯಾವ ಪರಿಹಾರ ಕೋರಿ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯ ಭೂಮಿಯು ಇಲ್ಲ ಎಂದು ಹೇಳಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಾತನ ಹೆಸರು ಸೀತಪ್ಪ. ಸೀತಪ್ಪನಿಗೆ ರಾಮಪ್ಪ ಮತ್ತು ವೆಂಕಟರಾಯಪ್ಪ ಎಂಬ ಇಬ್ಬರು ಮಕ್ಕಳು. ರಾಮಪ್ಪನಿಗೆ ನಾರಾಯಣರೆಡ್ಡಿ ಮತ್ತು ಸೀತಪ್ಪ ಎಂಬ ಇಬ್ಬರು ಮಕ್ಕಳು. ಸೀತಪ್ಪನಿಗೆ ಇಬ್ಬರು ಮಕ್ಕಳು ಬೈರಾರೆಡ್ಡಿ ಮತ್ತು ಆಂಜನೇಯರೆಡ್ಡಿ. ವೆಂಕಟರಾಯಪ್ಪನಿಗೆ ಒಬ್ಬರೆ ಮಕ್ಕಳು ಆಂಜನೇಯರೆಡ್ಡಿ. ಈ ದಾವೆಯನ್ನು ಎಷ್ಟು ಆಸ್ತಿಯ ಮೇಲೆ ಹಾಕಿರುತ್ತೀರಾ ಎಂದರೆ ಕುಟುಂಬದಲ್ಲಿ ಎಷ್ಟು ಆಸ್ತಿ ಇದೆ ಎಲ್ಲಾ ಆಸ್ತಿಗಳ ಮೇಲೆ ಹಾಕಿರುತ್ತೇನೆ. ನಿಮ್ಮ ಕುಟುಂಬಕ್ಕೆ ಎಷ್ಟು ಸರ್ವೆ ನಂಬರ್ ಗಳು ಇವೆ ಎಂದರೆ ಸಾಕ್ಷಿಯು ಸರ್ವೆ ನಂಬರ್ ಹೇಳಲಾಗುವುದಿಲ್ಲ. ನಿಮ್ಮ ಕುಟುಂಬಕ್ಕೆ ಆಸ್ತಿಗಳು ಎಲ್ಲಿ ಎಲಿ ಇವೆ ಎಂದರೆ ಅಲ್ಲಿ ಸ್ವಲ್ಪ ಮತ್ತು ಇಲ್ಲಿ ಸ್ವಲ್ಪ ಇವೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಹಾಕಿರುವ ಆ್ತಗಳ ಸಂಬಂಧಿಸಿದಂತೆ ಯಾವ ದಾಖಲೆಗಳನ್ನು ಹಾಕಿರುತ್ತೀರಾ ಎಂದರೆ ಸಾಕ್ಷಿಯು ಎಷ್ಟು ಭೂಮಿಗೆ ಸಂಬಂಧಿಸಿದೆಯೂ ಅಷುಟ ದಾಖಲೆಗಳಿಗೆ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನೀವು, ಚೆನ್ನಪ್ಪ ರೆಡ್ಡಿ , ಬೈರೆಡ್ಡಿ , ಆಂಜನೇಯರೆಡ್ಡಿ ಎಲ್ಲರೂ ಒಂದೇ ಊರಿನಲ್ಲಿ ಇರುವುದು ಎಂದರೆ ಸರಿ. ನಿಮ್ಮೆಲ್ಲರಿಗೂ ವಾಸಿಸಲು ಮನೆ ಇದೆ ಎಂದರೆ ಸರಿ. ನಮ್ಮ ವಾಸದ ಮನೆಯನ್ನು ನಾವು ದಾವೆಯಲ್ಲಿ ಸೇರಿರುವುದಿಲ್ಲ. ಆದರೆ ಅವರು ಒಂದು ಕಡೆ ನಾವು ಒಂದು ಕಡೆ ಇರುತ್ತೇವೆ. ದಾವೆಯಲ್ಲಿ ಆ ಮನೆಯನ್ನು ಸೇರಿಸಲು ಎನು ತೊಂದರೆ ಇಲ್ಲ ಎಂದರೆ ಸಾಕ್ಷಿಯು ತೋದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಆಂಜನೇಯರೆಡ್ಡಿ, ಚೆನ್ನಪ್ಪ ರೆಡ್ಡಿ, ಬೈರೆಡ್ಡಿ, ಎಲ್ಲರೂ

ಜೊತೆಯಲ್ಲಿ ಇದ್ದೀರಾ ಎಂದು ಒಟ್ಟಾಗಿ ಇರುವುದಕ್ಕೆ ದಾಖಲೆಯನ್ನು ಹಾಕಿರುತ್ತೀರಾ ಎಂದರೆ ಸಾಕ್ಷಿಯು ನನಗೂ ಅವರಿಗೂ ಹೊಂದಾಣಿಕೆ ಆದರೆ ಬೇರೆ ಬೇರೆ ಇರುತ್ತೇವೆ ಎಂದು ನುಡಿಯುತ್ತಾರೆ. ನಿಮಗೂ ಚಿನ್ನಪ್ಪರೆಡ್ಡಿಯವರಿಗೂ ಬೇರೆ ಬೇರೆ ಪಡಿತರ ಚೀಟಿ ಇದೆ ಎಂದರೆ ಸರಿ. ನಿಮ್ಮ ತಾತ ಬದುಕಿದ್ದಾಗಲೇ ನೀವು ವಿಭಾಗವಾಗಿದ್ದೀರಿ ಎಂದರೆ ಸರಿ. ನಿಮಗೆ ಭಾಗಬಂದಂತಹ ಸ್ವತ್ತಿನಲ್ಲಿ ನೀವು ಅವರಿಗೆ ಭಾಗಬಂದಂತಹ ಸ್ವತ್ತಿನಲ್ಲಿ ಅವರು ಪಾಲು ವಿಭಾಗ ಮಾಡಿಕೊಂಡಿದ್ದೀರಾ ಎಂದರೆ ಸರಿಯಲ್ಲ. ಚಿನ್ನಪರೆಡ್ಡಿ ಅವರ ಅಪ್ಪನ ಭಾಗದಲ್ಲಿ ಬಂದಂತಹ ಭಾಗದಲ್ಲಿ ಬೋರ್ ವೇಲ್ ಹಾಕಿಸಿಕೊಂಡ ಇದ್ದಾರೆ ಎಂದರೆ ನನ್ನ ತಂದೆ ಮತ್ತು ಅವರ ತಂದೆ ಇಬ್ಬರೂ ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ. ಚಿನ್ನಪ್ಪರೆಡ್ಡಿ ಯವರ ಜಮೀನಿನಲ್ಲಿ ಅಭಿವೃದ್ಧಿ ಪರಡಿಸಿಕೊಂಡು ಅವರ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ನನಗೆ ಒಬ್ಬ ಮಗಳು ಮತ್ತು ಒಬ್ಬ ಮಗ ಇದ್ದಾರೆ. ಅವರಿಬ್ಬರೂ ಬೆಂಗಳೂರಿನಲ್ಲಿ ಇರುತ್ತಾರೆ ಹಾಗೂ ಇಲ್ಲಿಯೂ ಇರುತ್ತಾರೆ. ಚಿನ್ನಪ್ಪರೆಡ್ಡಿಯ ಮಗ ಮತ್ತು ಮೊಮ್ಮಗ ಊರಿನಲ್ಲೆ ಕೆಲಸ ಮಾಡಿಕೊಂಡು ಇರುತ್ತಾರೆ ಎಂದರದೆ ಇರಬಹುದು ಎಂದು ನುಡಿಯುತ್ತಾರೆ. ನಿಮಗೆ ವಯಸ್ಸಾಗಿರುವುದರಿಂದ ವ್ಯವಸಾಯು ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ವಯಸ್ಸಾಗಿರುವ ಕಾರಣ ಹಾಗೂ ನಿಮ್ಮ ಮಗ ಬೆಂಗಳೂರಿನಲ್ಲಿರುವ ಕಾರಣ ನಿಮಗೆ ಬಂದ ಜಮೀನಿನಲ್ಲಿ ವ್ಯವಸಾಯ ಮಾಡದೇ ಉಳುಮೆ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಚಿನ್ನಪ್ಪರೆಡ್ಡಿ ವ್ಯವಸಾಯ ಮಾಡುತ್ತಿದ್ದು ನೀವು ವ್ಯಾಪಾರ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಎಷ್ಟು ವಿಸ್ತೀರ್ಣದ ಜಮೀನಿದೆ ಅದರ ಚೆಕ್ಕು ಬಂದಿ ನಿಮಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಕುಟುಂಬಕ್ಕೆ ಒಟ್ಟು ಎಷ್ಟ ವಿಸ್ತೀರ್ಣದ ಆಸ್ತಿ ಇದೇ ಎಂದರೆ ವಯಸ್ಸಾಗಿರುವ ಕಾರಣ ಗೊತ್ತಿರುವುದಿಲ್ಲ. ಒಟ್ಟಾಗಿ ಇದ್ದಾಗೆ ಆಸ್ತಿಯನ್ನು ಖರೀದಿ ಮಾಡಿರುತ್ತೀರಾ ಎಂದು ತಿಳಿಸಿದ್ದು ಆದರೆ ಎಷ್ಟು ಆಸ್ತಿ ಇದೆ ಎಂದು ನಾನು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ 4 ಪ್ರತಿವಾದಿಯರಿಗೆ

ಬಂದಿದ್ದು ಅದನ್ನು ಅಭಿವೃದ್ದಿ ಪಡಿಕೊಂಡು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಆ ಜಮೀನಿನಲ್ಲಿ ಬೊರ್ ವೇಲ್ ಇದ್ದು ಕರೆಂಟ್ ವ್ಯವಸ್ದೆ ಇದೆ ಎಂದು ಸರಿ. ಪ್ರತಿವಾದಿ 1 ರವರ ಕರೆಂಟ್ ತೆಗೆದುಕೊಳ್ಳುವಾಗ ಅದು ಒಟ್ಟು ಕುಟುಂಬದ ಆಸ್ತಿಯಂದು ತಕರಾರು ಸಲ್ಲಿಸಿರುತ್ತೀರಾ ಎಂದರೆ ನನಗೆ ಗೊತ್ತಿರುವುದಿಲ್ಲ. 50 ವರ್ಷಗಳಿಂದ ಬೇರೆಯಾಗಿದ್ದು ಆಗ ಪಾಪಮ್ಮ ಮತ್ತು ಚಿನ್ನಪ್ಪರೆಡ್ಡಿ ಅವರು ದಾವಾ ಐಟಂ ನಂ 5 ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದು ಒಟ್ಟಾಗಿ ಖರೀದಿ ಮಾಡಿದ ಆಸ್ತಿ ಎಂದು ನುಡಿಯುತ್ತಾರೆ. ಆಸ್ತಿಯನ್ನು ಯಾರಿಂದ ಯಾವ ವರ್ಷ ಖರೀದಿ ಮಾಡಿರುತ್ತಾರೆ ಎಂದು ಸಾಕ್ಷಿಯು ಗೊತ್ತಿರುತ್ತದೆ ಬಿಲ್ಲಕೋನಪ್ಪ ರವರಿಂದ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸಂಗಮ್ಮ ನಿಂದ ಖರೀದಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸಂಗಮ್ಮ ಕುಟುಂಬಕ್ಕೆ ಮದುವೆಯಾಗಿ ಬಂದಿದ್ದು ಆಗ ನಾವು ಖರೀದಿ ಮಾಡಿರುತ್ತೇವೆ. ಸಂಗಮ್ಮಗೂ ಮತ್ತು ನಮ್ಮ ಕುಟುಂಬಕ್ಕೂ ಸಂಬಂಧ ಇದೆ. ಸಂಗಮ್ಮ ಮತ್ತು ಅವರ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇರುವುದಿಲ್ಲ ಆದರೆ ಸೇರಿಸಿರುವುದಿಲ್ಲ. ನಾನು ಚಿಕ್ಕವರಿದ್ದಾಗ ನೊಂದಣಿ ಮಾಡಿಸಿರುತ್ತೇವೆ. ಎಷ್ಟು ಜಮೀನು ಖರೀದಿ ಮಾಡಿರುತ್ತೇವೆ ಎಂದರೆ 24 ರಿಂದ 25 ಗುಂಟೆ. ಆ ಪತ್ರ ದಲ್ಲಿ ಎನು ಬರೆದಿದೆ ಎಂದು ಓದಿ ತಿಳಿದುಕೊಂಡಿರುವುದಿಲ್ಲ. ಆ ಜಮೀನು ನನಗೂ ಮತ್ತು ಚಿನ್ನಪ್ಪರೆಡ್ಡಿಯರಿಗೆ ಆಗಿರುತ್ತದೆ. ಆ ಜಮೀನಿಗೂ ನಿಮಗೂ ಯಾವುದೇ ಸಂಬಂಧ ಇರುವುದಿಲ್ಲ . ಆ ಜಮೀನಿನಲ್ಲಿ ಚಿನ್ನಪ್ಪರೆಡ್ಡಿ ಮತ್ತು ಪಾಪಮ್ಮ ನವರಿಗೆ ಅರ್ಧ ಅರ್ಧ ಆಗಿದೆ ಎಂದರೆ ಸರಿಯಲ್ಲ. ಆ ಪಾಪಮ್ಮ ಬೇರೆಯವರು ಎಂದರೆ ನಮ್ಮ ಮನೆಗೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಪಾಪಮ್ಮ ಮತ್ತು ಅವರ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ದಾವಾ ಐಟಂ 5 ರಲ್ಲಿ ಚಿನ್ನಪ್ಪರೆಡ್ಡಿಗೆ 12 ½ ಗುಂಟೆ ಪಾಪಮ್ಮನಿಗೆ 12 ½ ಗುಂಟೆ ಎಂದರೆ ಸಾಕ್ಷಿಯು ನನಗೂ ಮತ್ತು ಚಿನ್ನಪ್ಪರೆಡ್ಡಿ ಯರಿಗೆ ಜಂಟಿಯಾಗಿದೆ ಎಂದು ನುಡಿಯುತ್ತಾರೆ ಪಾಪಮ್ಮ ಮತ್ತು ಚಿನ್ನಪರೆಡ್ಡಿ

ಆಸ್ತಿಯನ್ನು ಖರೀದಿ ಮಾಡಿದ್ದು, ಅದು ಒಟ್ಟು ಕುಟುಂಬದ ಆಸ್ತಿಯಂದು ಸೇರಿಸಿರುತ್ತೀರಾ ಎಂದರೆ ಸರಿಯಲ್ಲ

ಮುಂದುವರೆದ ಪಾಟೀಸವಾಲಿಗೆ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

ಪಿಡಬ್ಲ್ಯೂ -                                                                                    ಓ.ಎಸ್.ನಂ.    /20

ದಿನಾಂಕಃ 27-03-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ.     ವಕೀಲರಿಂದ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

Plaintiff counsel present, plaintiff filed application U/sec. 7 rule 14 (3) of CPC on IA No.III along with documents. Defendant counsel submits no objection to IA hence in the interest of justice and equity IA No.III is hereby allowed, documents taken on record.

Plaintiff counsel present filed memo along with documents. Plaintiff examined as PW1. Chief examination filed by way of affidavit, got marked ExP1 to ExP11.

For further chief of pw1.

Call on 05-07-2022.

**Prl. C. J. & JMFC,.**
**Chintamani**.